download from: www.kpscvaani.com

# GPSTR-2017 (DE)

**EXAMINATION CODE : 03 A**

ನೋಂದಣಿ ಸಂಖ್ಯೆ/Registration No.

3013837

ಪ್ರಶ್ನೆ ಪತ್ರಿಕೆ ಪುಸ್ತಿಕೆ ಕ್ರಮಸಂಖ್ಯೆ / Question Booklet Sl. No.

7716112

## ಪ್ರಶ್ನೆ ಪತ್ರಿಕೆ ಪುಸ್ತಿಕೆ – ಪತ್ರಿಕೆ-3

(ಪ್ರಶ್ನೆ ಪತ್ರಿಕೆ ಪುಸ್ತಿಕೆಯಲ್ಲಿ ನೀಡಲಾಗಿರುವ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ)

ವಿಷಯ : ಭಾಷಾ ಸಾಮರ್ಥ್ಯ (ವಿವರಣಾತ್ಮಕ ಪರೀಕ್ಷೆ)

ಗರಿಷ್ಠ ಅಂಕಗಳು :100 ಗರಿಷ್ಠ ಸಮಯ : 2.00 ಗಂಟೆಗಳು ಅವಧಿ ಮಧ್ಯಾಹ್ನ : 2.30 ರಿಂದ 4.30 ರವರೆಗೆ

### <u>ಅಭ್ಯರ್ಥಿಗಳಿಗೆ ಸೂಚನೆಗಳು</u>

1. ಮೊಹರು ಮಾಡಿರುವ ಪ್ರಶ್ನೆಪತ್ರಿಕೆ ಪುಸ್ತಿಕೆಯು 100 ಅಂಕಗಳಿಗೆ ವಿವರಣಾತ್ಮಕ ಪ್ರಶ್ನೆಗಳನ್ನು ಒಳಗೊಂಡಿದೆ.
2. ಉತ್ತರ ಪತ್ರಿಕೆಯಲ್ಲಿ ಸ್ಪಷ್ಟವಾಗಿ ಪ್ರಶ್ನೆ ಸಂಖ್ಯೆಗಳನ್ನು ಬರೆಯಿರಿ.
3. ಒಂದೇ ಪ್ರಶ್ನೆಗೆ ಉತ್ತರವನ್ನು ಪುನರಾವರ್ತಿಸಬಾರದು.
4. ಅವಶ್ಯಕತೆ ಇರುವಲ್ಲಿ ಚಿತ್ರಗಳು, ಕೋಷ್ಠಕಗಳು, ನಕ್ಷೆಗಳು ಮತ್ತು ಫ್ಲೋಚಾರ್ಟ್‌ಗಳನ್ನು ಬಿಡಿಸಿ.
5. ಪರೀಕ್ಷಾ ಕೊಠಡಿಯೊಳಗೆ ಕ್ಯಾಲುಕ್ಯುಲೇಟರ್ ಹಾಗೂ ಮೊಬೈಲ್ ಫೋನ್‌ಗಳನ್ನು ತೆಗೆದುಕೊಂಡು ಹೋಗಲು ಅವಕಾಶವಿರುವುದಿಲ್ಲ.
6. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರ ಮಾಡುವುದು (ನಕಲು) ಕಂಡುಬಂದಲ್ಲಿ, ಅಂತಹ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹವರ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮವನ್ನು ತೆಗೆದುಕೊಳ್ಳಲಾಗುವುದು.
7. ಆನ್‌ಲೈನ್ ಅರ್ಜಿಯಲ್ಲಿ ಘೋಷಿಸಿರುವಂತೆ ವಿವರಣಾತ್ಮಕ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಭಾಷಾ ಮಾಧ್ಯಮದಲ್ಲಿ ಬರೆಯತಕ್ಕದ್ದು.

SEAL

downloaded from: www.kpscvaani.com

Scanned by CamScanner

download from: www.kpscvaani.com

I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಕೊಟ್ಟಿರುವ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ. $(5 \times 1 = 5)$

1. ವಸುಧೆ
2. ಮಾರ್ದನಿ
3. ವಾತ್ಸಲ್ಯ
4. ರವಿ
5. ಅಂಜು

ಕೊಟ್ಟಿರುವ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ. $(5 \times 1 = 5)$

6. ಪ್ರಬಲ
7. ನಾಗರಿಕ
8. ಜೀವ
9. ಮಿತ್ರ
10. ಜನನ

ಕೊಟ್ಟಿರುವ ನುಡಿಗಟ್ಟುಗಳ ಅರ್ಥವನ್ನು ಬರೆಯಿರಿ. $(5 \times 1 = 5)$

11. ಕೈಬಿಡು
12. ದಡಕಾಣಿಸು
13. ಮುಖಕ್ಕೆ ಮಸಿ ಹಚ್ಚು
14. ಸೊಪ್ಪು ಹಾಕು
15. ಹೊಟ್ಟೆ ಹೊರೆ



downloaded from: www.kpscvaani.com

Scanned by CamScanner

download from: www.kpscvaani.com

ಕೊಟ್ಟಿರುವ ಗಾದೆಗಳನ್ನು ಪೂರ್ಣಗೊಳಿಸಿರಿ. (5 × 1 = 5)

16. ದೇವನೊಬ್ಬ ________

17. ಕೊಟ್ಟಿದ್ದು ತನಗೆ ________

18. ಓದು ಒಕ್ಕಾಲು ________

19. ಸತ್ಯಕ್ಕೆ ಸಾವಿಲ್ಲ ________

20. ಮೂರ್ತಿ ಚಿಕ್ಕದಾದರೂ ________

II. ಕೊಟ್ಟಿರುವ ಪ್ರಶ್ನೆಗಳಿಗೆ ನೀಡಿರುವ ಸೂಚನೆಯಂತೆ ಉತ್ತರ ಬರೆಯಿರಿ.

21. ಕೊಟ್ಟಿರುವ ಪದಗಳು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿವೆ ತಿಳಿಸಿ. (2 × 1 = 2)

(ಅ) ಅರ್ಜಿ

(ಆ) ಅಮಾನತು

22. ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿರಿ. (2 × 1 = 2)

(ಅ) ಶಾಲೆಯನ್ನು

(ಆ) ಲೋಕಾಂತರ

23. ಕೊಟ್ಟಿರುವ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸವನ್ನು ಹೆಸರಿಸಿರಿ. (2 × 1 = 2)

(ಅ) ಬೆಟ್ಟದಾವರೆ

(ಆ) ಸಪ್ತಸ್ವರಗಳು

24. ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯವನ್ನು ಮಾಡಿ ಬರೆಯಿರಿ. (2 × 1 = 2)

(ಅ) ಸುಂದರ

(ಆ) ಉದಾತ್ತ



downloaded from: www.kpscvaani.com

Scanned by CamScanner

download from: www.kpscvaani.com

25. ಕೊಟ್ಟಿರುವ ಹೇಳಿಕೆಗಳಿಗೆ ಸೂಕ್ತವಾದ ಒಂದು ಪದವನ್ನು ಬರೆಯಿರಿ. (2 × 1 = 2)

(ಅ) ಕುಟುಂಬವನ್ನು ಮಾಡುವವನು

(ಆ) ಹೂವನ್ನು ಮಾರುವವಳು

26. ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ವಿಭಕ್ತಿಯನ್ನು ಹೆಸರಿಸಿರಿ. (2 × 1 = 2)

(ಅ) ಆಕಾಶದಿಂದ

(ಆ) ವಾಣಿಯು

27. ಕೊಟ್ಟಿರುವ ವಾಕ್ಯಗಳಲ್ಲಿ ಬಂದಿರುವ ಸರ್ವನಾಮ ಪದವನ್ನು ಆರಿಸಿ ಬರೆಯಿರಿ. (2 × 1 = 2)

(ಅ) ನಾವು ಪ್ರಾಮಾಣಿಕರಾಗಿ ದೇಶಸೇವೆ ಮಾಡೋಣ.

(ಆ) ಇವರು ದೂರದಿಂದ ದಣಿದು ಬಂದಿದ್ದಾರೆ.

28. ಕೊಟ್ಟಿರುವ ಪದಗಳಲ್ಲಿ ಬಂದಿರುವ ಅವ್ಯಯ ಪದವನ್ನು ಆರಿಸಿ ಬರೆಯಿರಿ. (2 × 1 = 2)

(ಅ) ನದಿ ಜುಳು ಜುಳು ಹರಿಯುತ್ತಿದೆ.

(ಆ) ಹೌದು ! ನನ್ನ ಮಗನೇ ಪ್ರಥಮ ಸ್ಥಾನ ಪಡೆದನು.

29. ಕೊಟ್ಟಿರುವ ವಾಕ್ಯಗಳ ವಚನವನ್ನು ಬದಲಿಸಿ ಬರೆಯಿರಿ. (2 × 1 = 2)

(ಅ) ಅದು ನಂಬಿಕೆಯುಳ್ಳ ಪ್ರಾಣಿಯಾಗಿದೆ.

(ಆ) ಅವನು ತುಂಬಾ ಬುದ್ಧಿವಂತನಾಗಿದ್ದಾನೆ.

30. ಮೊದಲೆರಡು ಪದಗಳಿಗೆ ಇರುವ ಸಂಬಂಧವನ್ನು ಗುರುತಿಸಿ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ. (2 × 1 = 2)

(ಅ) ಪೂಜಾರಿ : ಅನ್ವರ್ಥಕನಾಮ : : ದೇಶ : ________

(ಆ) ದೊಡ್ಡದು : ಗುಣವಾಚಕ : : ಎಷ್ಟು : ________

31. ಕೊಟ್ಟಿರುವ ವಾಕ್ಯಗಳನ್ನು ಭೂತಕಾಲಕ್ಕೆ ಪರಿವರ್ತಿಸಿ ಬರೆಯಿರಿ. (2 × 1 = 2)

(ಅ) ರಮೇಶನು ಊಟವನ್ನು ಮಾಡುತ್ತಾನೆ.

(ಆ) ಶ್ರೀದೇವಿ ಸಂಗೀತವನ್ನು ಆಲಿಸುವಳು.



downloaded from: www.kpscvaani.com

Scanned by CamScanner

download from: www.kpscvaani.com

32. ಕೊಟ್ಟಿರುವ ಪದಗಳಿಗೆ ತತ್ಸಮ–ತದ್ಭವಗಳನ್ನು ಬರೆಯಿರಿ. (2 × 1 = 2)

(ಅ) ಮೂರುತಿ

(ಆ) ಮುಖ

33. ಕೊಟ್ಟಿರುವ ವಾಕ್ಯಗಳಿಗೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಹಾಕಿ ಬರೆಯಿರಿ. (2 × 1 = 2)

(ಅ) ಅಯ್ಯಾ ದುರ್ಯೋಧನ ನಿಮಿಷಕಾಲ ನಿನ್ನ ಪ್ರಾಣವನ್ನು ಬಿಗಿಹಿಡಿದುಕೋ.

(ಆ) ನನಗೆ ಮೋಸವಾಯಿತೆಂದು ನೀವು ಭಾವಿಸುವಿರಾ

34. ಕೊಟ್ಟಿರುವ ಪದಗಳಿಗೆ ಗ್ರಾಂಥಿಕ ರೂಪವನ್ನು ಬರೆಯಿರಿ. (2 × 1 = 2)

(ಅ) ಹೇಳತಾನ

(ಆ) ಸಿಡಿದ್ದಾಂಗ

35. ಕೊಟ್ಟಿರುವ ವಾಕ್ಯಗಳಲ್ಲಿರುವ ಜೋಡುನುಡಿ/ದ್ವಿರುಕ್ತಿಗಳನ್ನು ಗುರುತಿಸಿ ಬರೆಯಿರಿ. (2 × 1 = 2)

(ಅ) ಹೌದು ಹೌದು ಇಂದು ಪರೀಕ್ಷೆ ನಡೆಯುತ್ತಿದೆ.

(ಆ) ವಿದ್ಯಾರ್ಥಿಗಳು ಓದು–ಬರೆಹಗಳಲ್ಲಿ ಹೆಚ್ಚು ತೊಡಗಿಕೊಳ್ಳಬೇಕು.

III. ಕೊಟ್ಟಿರುವ ಗದ್ಯಭಾಗಗಳನ್ನು ಓದಿ ಅರ್ಥೈಸಿಕೊಂಡು ಅವುಗಳ ಮುಂದೆ ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

36. ಗದ್ಯಭಾಗ–1 (5 × 1 = 5)

ಭಾರತ ಜನನಿಯ ತನುಜಾತೆಯಾದ ಕರ್ನಾಟಕ ಮಾತೆ, ಇಂದು ಭಾರತದ ಭೂಪಟದಲ್ಲಿ ತನ್ನದೇ ಆದ ಹಲವಾರು ವೈಶಿಷ್ಟ್ಯಗಳಿಂದ ರಾರಾಜಿಸುತ್ತಿದ್ದಾಳೆ. ಆಂಗ್ಲರ ಆಳ್ವಿಕೆಯ ಕಾಲದಲ್ಲಿ ಇಂದಿನ ಕನ್ನಡನಾಡಿನ ಪ್ರದೇಶಗಳು ಸುಮಾರು 20 ಆಡಳಿತದಲ್ಲಿ ಹರಿದು ಹಂಚಿ ಹೋಗಿದ್ದವು. ಅನಂತರ 1947 ರಲ್ಲಿ ಮದ್ರಾಸ, ಮುಂಬೈ, ಮೈಸೂರು, ಕೊಡಗು, ಹೈದರಾಬಾದ್ ಪ್ರಾಂತಗಳೆಂಬ ಬೇರೆಬೇರೆ ಆಡಳಿತಗಳಿಗೆ ಒಳಪಟ್ಟಿತ್ತು. 1956 ರಲ್ಲಿ ಈ ಎಲ್ಲಾ ಪ್ರಾಂತಗಳನ್ನು ಒಟ್ಟು ಸೇರಿಸಿ "ಮೈಸೂರು ರಾಜ್ಯ" ಎಂಬ ಹೆಸರಿನಲ್ಲಿ ಇಂದಿನ ನಮ್ಮ ಕನ್ನಡನಾಡು ಉದಯಿಸಲ್ಪಟ್ಟಿತು. ಮುಂದೆ 1973 ರ ನವ್ಹೆಂಬರ್ 1 ರಂದು ಮೈಸೂರು ರಾಜ್ಯಕ್ಕೆ "ಕರ್ನಾಟಕ" ಎಂದು ಪುನರ್‌ನಾಮಕರಣ ಮಾಡಲಾಯಿತು.



downloaded from: www.kpscvaani.com

Scanned by CamScanner

download from: www.kpscvaani.com

ಪ್ರಶ್ನೆಗಳು :

(ಅ) ಭಾರತ ಜನನಿಯ ತನುಜಾತೆ ಯಾರು?

(ಆ) ಎಷ್ಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದ ಕೀರ್ತಿ ಕನ್ನಡಿಗರದ್ದು?

(ಇ) 1947 ರ ಸುಮಾರಿಗೆ ಕನ್ನಡ ನಾಡು ಯಾವ ಯಾವ ಪ್ರಾಂತಗಳಲ್ಲಿ ಹಂಚಿಹೋಗಿತ್ತು?

(ಈ) ಮೈಸೂರು ರಾಜ್ಯ ಯಾವಾಗ ಸ್ಥಾಪನೆಯಾಯಿತು?

(ಉ) ಮೈಸೂರು ರಾಜ್ಯಕ್ಕೆ "ಕರ್ನಾಟಕ" ಎಂದು ಪುನರ್‌ನಾಮಕರಣ ಮಾಡಿದ್ದು ಯಾವಾಗ?

37. ಗದ್ಯಭಾಗ–2 **(5 × 1 = 5)**

ಭಾರತದ ಅತ್ಯಂತ ಸಾಹಸಿ ಉದ್ಯಮಶೀಲರಲ್ಲಿ "ಧೀರುಭಾಯಿ ಅಂಬಾನಿ" ಪ್ರಮುಖರಾಗಿದ್ದಾರೆ. ಇವರು ಭಾರತದ ಸಮೂಹ ಸಂಸ್ಥೆಯನ್ನು ಹುಟ್ಟು ಹಾಕಿದವರಲ್ಲಿ ಅತ್ಯಂತ ಪ್ರಮುಖರು. ಇವರ ತಂದೆಯವರು ಶಾಲಾ ಉಪಾಧ್ಯಾಯರಾಗಿದ್ದರು. ಇವರು "ಮೌಂಟ್‌ಗಿರ್‌ನಾರ್" ಎಂಬಲ್ಲಿ ವಾರಾಂತ್ಯದಲ್ಲಿ ಭಜನೆಗಳ ಪುಸ್ತಕಗಳನ್ನು ಯಾತ್ರಾರ್ಥಿಗಳಿಗೆ ಮಾರುವುದರ ಮೂಲಕ ಉದ್ಯಮವನ್ನು ಪ್ರಾರಂಭಿಸಿದರು. ತಮ್ಮ ಮೆಟ್ರಿಕ್ಯುಲೇಶನ್ ಪರೀಕ್ಷೆಯ ನಂತರ ಹದಿನಾರನೆಯ ವಯಸ್ಸಿನಲ್ಲಿ ಆಫ್ರಿಕಾದ "ಆಡೆನ್" ಎಂಬ ಪಟ್ಟಣಕ್ಕೆ ಹೋದರು. ಅಲ್ಲಿನ ಪೆಟ್ರೋಲ್ ಬಂಕ್ ಒಂದರಲ್ಲಿ ಸೇವೆಗೆ ಸೇರಿ ನಂತರ ತೈಲ ಕಂಪೆನಿಯೊಂದರಲ್ಲಿ ಗುಮಾಸ್ತರಾಗಿ ಕೆಲಸ ನಿರ್ವಹಿಸಿದರು. ಆಫ್ರಿಕಾದಿಂದ 1958 ರಲ್ಲಿ ಐವತ್ತು ಸಾವಿರ ರೂಪಾಯಿಗಳೊಂದಿಗೆ ಭಾರತಕ್ಕೆ ಮರಳಿ ಬಂದರು ಮತ್ತು ಬಟ್ಟೆ ವ್ಯಾಪಾರದ ಕಂಪೆನಿಯೊಂದನ್ನು ಪ್ರಾರಂಭಿಸಿದರು. ಇಂದು ಅವರು ಸ್ಥಾಪಿಸಿದ "ರಿಲಯನ್ಸ್" ಸಂಸ್ಥೆ ಪ್ರಪಂಚದಲ್ಲಿಯೇ ಮುಖ್ಯ ಉದ್ಯಮಗಳಲ್ಲೊಂದಾಗಿದೆ.

ಪ್ರಶ್ನೆಗಳು :

(ಅ) ಧೀರುಬಾಯಿ ಅಂಬಾನಿಯವರ ತಂದೆಯವರು ಯಾವ ಉದ್ಯೋಗದಲ್ಲಿದ್ದರು?

(ಆ) ಅಂಬಾನಿಯವರು ಮೊದಲು ಉದ್ಯಮವನ್ನು ಹೇಗೆ ಪ್ರಾರಂಭಿಸಿದರು?

(ಇ) ಅಂಬಾನಿಯವರು ಆಫ್ರಿಕಾದ ಆಡೆನ್ ಪಟ್ಟಣದಲ್ಲಿ ಮಾಡಿದ ಕೆಲಸಗಳಾವುವು?

(ಈ) ಅಂಬಾನಿಯವರು ಎಷ್ಟು ರೂಪಾಯಿಗಳೊಂದಿಗೆ ಭಾರತಕ್ಕೆ ಹಿಂದಿರುಗಿ ಬಂದರು?

(ಉ) ಅಂಬಾನಿಯವರು ಸ್ಥಾಪಿಸಿದ ಪ್ರಸಿದ್ಧ ಸಂಸ್ಥೆಯ ಹೆಸರೇನು?



downloaded from: www.kpscvaani.com

Scanned by CamScanner

download from: www.kpscvaani.com

38. ಗದ್ಯಭಾಗ–3 (5 × 1 = 5)

"ಭಕ್ತಿ ಭಂಡಾರಿ" ಎಂದು ಖ್ಯಾತರಾಗಿರುವ ಬಸವಣ್ಣನವರು 12ನೇ ಶತಮಾನದ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ರಾಂತಿಯ ಕೇಂದ್ರಪುರುಷ. ಇಂದಿನ ವಿಜಯಪುರ ಜಿಲ್ಲೆಯ "ಬಸವನ ಬಾಗೇವಾಡಿ"ಯಲ್ಲಿ ಮಾದಿರಾಜ ಮಾದಾಂಬೆ ದಂಪತಿಗಳ ಮಗನಾಗಿ ಜನಿಸಿದರು. ಕೂಡಲ ಸಂಗಮದಲ್ಲಿ ವಿದ್ಯಾಭ್ಯಾಸವನ್ನು ಪಡೆದುಕೊಂಡು ಬಿಜ್ಜಳನ ಆಸ್ಥಾನದಲ್ಲಿ ಕೋಶಾಧಿಕಾರಿಯಾಗಿದ್ದರು. ಬಸವಕಲ್ಯಾಣದಲ್ಲಿ ಅಲ್ಲಮಪ್ರಭುದೇವರ ಅಧ್ಯಕ್ಷತೆಯಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿ, ವಚನಗಳ ರಚನೆಗೈದರು. ಭಕ್ತಿ, ಜ್ಞಾನ, ಮಾನವೀಯತೆ ಹಾಗೂ ವೈರಾಗ್ಯಪರವಾದ ಬಸವಣ್ಣನವರ ವಚನಗಳು ಸುಲಭವಾದ, ಲಲಿತವಾದ ಸರಳ ಭಾಷೆಯಿಂದ ಕೂಡಿವೆ. ಬಸವಣ್ಣನವರ ಮುಖ್ಯ ಕಾಳಜಿ ಸಮಾಜಸುಧಾರಣೆಯಾಗಿತ್ತು. ಜಾತಿ, ಕುಲ, ಲಿಂಗ ಭೇದಗಳಿಂದ ಹೊರತಾದ ಸಮಾಜ ನಿರ್ಮಿತಿ ಅವರ ಪ್ರಮುಖ ಗುರಿಯಾಗಿದ್ದಿತು. ಜನರ ಅಜ್ಞಾನ, ಕಂದಾಚಾರ, ಜಾತಿ ಸಂಕರಗಳನ್ನು ಕುರಿತು ಅವರ ವಚನಗಳು ಚಿಂತಿಸಿವೆ. ಬಸವಣ್ಣನವರು "ಕಾಯಕವೇ ಕೈಲಾಸ" ಎನ್ನುವ ಮೂಲಕ ಕಾಯಕದ ಮಹತ್ವವನ್ನು ಜಗತ್ತಿಗೆ ಸಾರಿದ ಮಹಾಪುರುಷ.

ಪ್ರಶ್ನೆಗಳು :

(ಅ) ಬಸವಣ್ಣನವರ ಜನ್ಮಸ್ಥಳ ಯಾವುದು?

(ಆ) ಬಸವಣ್ಣನವರ ಮುಖ್ಯ ಕಾಳಜಿ ಯಾವುದಾಗಿತ್ತು?

(ಇ) ಬಸವಣ್ಣನವರ ಪ್ರಮುಖ ಗುರಿ ಏನಾಗಿತ್ತು?

(ಈ) ಬಸವಣ್ಣನವರ ವಚನಗಳು ಏನನ್ನು ಚಿಂತಿಸಿವೆ?

(ಉ) ಬಸವಣ್ಣನವರು ಯಾವುದರ ಮಹತ್ವವನ್ನು ಜಗತ್ತಿಗೆ ಸಾರಿದರು?

39. ಗದ್ಯಭಾಗ–4 (5 × 1 = 5)

"ಭಾರತದ ಅತ್ಯಂತ ಶ್ರೇಷ್ಠ ಗಣಿತಜ್ಞ" ಎಂಬ ಪ್ರಶಂಸೆಗೆ ಪಾತ್ರರಾದ "ಶ್ರೀನಿವಾಸ ರಾಮಾನುಜನ್" ಅವರು ಹುಟ್ಟಿದ್ದು 22ನೇ ಡಿಸೆಂಬರ್ 1887 ರಲ್ಲಿ. ರಾಮಾನುಜನ್‌ರಿಗೆ ಬಾಲ್ಯದಿಂದಲೂ ಗಣಿತವೊಂದನ್ನು ಬಿಟ್ಟು ಮಿಕ್ಕ ವಿಷಯಗಳಲ್ಲಿ ಆಸಕ್ತಿ ಇರಲಿಲ್ಲ. ಹೀಗಾಗಿ 1904 ರಲ್ಲಿ ಕುಂಭಕೋಣಂ ಕಾಲೇಜು ಪರೀಕ್ಷೆಯಲ್ಲಿ ಫೇಲಾದರು! ಅನಂತರ ಅನಾರೋಗ್ಯದ ಕಾರಣದಿಂದ ಕುಂಟುತ್ತಾ ಸಾಗಿದ ಅವರ ವಿದ್ಯಾಭ್ಯಾಸ 1907 ರಲ್ಲಿ ಮುಕ್ತಾಯವಾಯಿತು.



downloaded from: www.kpscvaani.com

Scanned by CamScanner

download from: www.kpscvaani.com

ರಾಮಾನುಜನ್ 1909 ರಲ್ಲಿ ಮದುವೆಯಾದಾಗ ಕೆಲಸಕ್ಕೆ ಸೇರುವುದು ಅನಿವಾರ್ಯವಾಯಿತು. ಮದರಾಸಿನ ಅಕೌಂಟೆಂಟ್ ಜನರಲ್ ಆಫೀಸಿನಲ್ಲಿ ಹಂಗಾಮಿ ಗುಮಾಸ್ತ ಕೆಲಸ, ಬಂದರಿನ ಗುಮಾಸ್ತ ಕೆಲಸಗಳನ್ನು 25 ರೂಪಾಯಿ ಸಂಬಳದಲ್ಲಿ ನಿರ್ವಹಿಸಿದರು. ವಿರಾಮದ ವೇಳೆಯಲ್ಲಿ "ವಿಮುಖಶ್ರೇಣಿ ಸಿದ್ಧಾಂತ, ದೀರ್ಘವೃತ್ತಿಯ ಅನುಕಲನ, ಬರ್ನೂಲಿ ಸಂಖ್ಯೆ"ಗಳ ಬಗೆಗೆ ಸಂಶೋಧನೆ ನಡೆಸಿ "ಜನರಲ್ ಆಫ್ ದಿ ಇಂಡಿಯನ್ ಮ್ಯಾಥಮ್ಯಾಟಿಕಲ್ ಸೊಸೈಟಿ"ಯಲ್ಲಿ ಪ್ರಕಟಿಸಿದರು.

ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಖ್ಯಾತ ಪ್ರಾಧ್ಯಾಪಕ ಜಿ.ಹೆಚ್. ಹಾರ್ಡಿ ಅವರೊಂದಿಗೆ ಪತ್ರ ವ್ಯವಹಾರ ಮಾಡಿ 1913 ರಲ್ಲಿ 120 ಪ್ರಮೇಯಗಳನ್ನು ಕಳುಹಿಸಿ ಅವರ ಮೆಚ್ಚುಗೆಗೆ ಪಾತ್ರರಾದರು. 1914 ರಲ್ಲಿ ವಿದ್ಯಾರ್ಥಿವೇತನದ ಮೇರೆಗೆ ಇಂಗ್ಲೆಂಡ್‌ಗೆ ಹೋಗಿ ಅಲ್ಲಿ 30 ಕ್ಕೂ ಹೆಚ್ಚು ವಿದ್ವತ್ಪೂರ್ಣ ಲೇಖನಗಳನ್ನು ಪ್ರಕಟಿಸಿದರು. ಕ್ಷಯರೋಗಕ್ಕೆ ತುತ್ತಾಗಿ 1919 ರಲ್ಲಿ ಭಾರತಕ್ಕೆ ಮರಳಿದರು. 26–4–1920 ರಂದು ರಾಮಾನುಜನ್ ನಿಧನರಾದರು. ಆ ಮೂಲಕ ಭಾರತ ತನ್ನ ಹೆಮ್ಮೆಯ ಗಣಿತಜ್ಞನನ್ನು ಕಳೆದುಕೊಂಡು ಬಡವಾಯಿತು.

ಪ್ರಶ್ನೆಗಳು :

(ಅ) ಶ್ರೀರಾಮಾನುಜನ್ ಅವರು ಜನಿಸಿದ್ದು ಯಾವಾಗ?

(ಆ) ಶ್ರೀರಾಮಾನುಜನ್ ಕಾಲೇಜು ಪರೀಕ್ಷೆಯಲ್ಲಿ ಯಾಕೆ ಫೇಲಾದರು?

(ಇ) ಶ್ರೀರಾಮಾನುಜನ್ ಯಾವ ಯಾವ ಆಫೀಸ್‌ನಲ್ಲಿ ಗುಮಾಸ್ತ ಕೆಲಸ ಮಾಡಿದರು?

(ಈ) ವಿರಾಮದ ವೇಳೆಯಲ್ಲಿ ಯಾವ ವಿಷಯಗಳ ಕುರಿತು ಸಂಶೋಧನೆ ನಡೆಸಿದರು?

(ಉ) ಶ್ರೀನಿವಾಸ ರಾಮಾನುಜನ್ ಯಾವ ರೋಗಕ್ಕೆ ತುತ್ತಾದರು?

**IV. ಕೊಟ್ಟಿರುವ ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರ ಬರೆಯಿರಿ.**

**40.** "ತ್ಯಾಜ್ಯ ವಸ್ತು ನಿರ್ವಹಣೆ" ಈ ವಿಷಯವನ್ನು ಕುರಿತು 8/10 ವಾಕ್ಯಗಳಲ್ಲಿ ಟಿಪ್ಪಣಿಯನ್ನು ಬರೆಯಿರಿ. **(1 × 5 = 5)**

**41.** "ಕೂಡಿ ಬಾಳಿದರೆ ಸ್ವರ್ಗ ಸುಖ" ಈ ಗಾದೆಯ ಮಹತ್ವವನ್ನು ವಿಸ್ತರಿಸಿ ಬರೆಯಿರಿ. **(1 × 5 = 5)**

**42.** "ಜೈ ಜವಾನ್, ಜೈ ಕಿಸಾನ್, ಜೈ ವಿಜ್ಞಾನ್" ಈ ಹೇಳಿಕೆಯನ್ನು 8/10 ವಾಕ್ಯಗಳಲ್ಲಿ ವಿಸ್ತರಿಸಿ ಬರೆಯಿರಿ. **(1 × 5 = 5)**



downloaded from: www.kpscvaani.com

Scanned by CamScanner

download from: www.kpscvaani.com


43. ಕೊಟ್ಟಿರುವ ಪದ್ಯಭಾಗವನ್ನು ಓದಿಕೊಂಡು ನಿಮ್ಮ ಮಾತುಗಳಲ್ಲಿ ಸಾರಾಂಶವನ್ನು ಬರೆಯಿರಿ. **(1 × 5 = 5)**

ಆಚಾರಕರಸಾಗು ನೀತಿಗೆ ಪ್ರಭುವಾಗು

ಮಾತಿನಲಿ ಚೂಡಾಮಣಿಯಾಗು । ನನಕಂದ

ಜ್ಯೋತಿಯೇ ಆಗು ಜಗಕೆಲ್ಲ.

44. ಕೊಟ್ಟಿರುವ ಚಿತ್ರವನ್ನು ಗಮನಿಸಿ 8/10 ವಾಕ್ಯಗಳಲ್ಲಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ. **(1 × 5 = 5)**



45. ನಿಮ್ಮನ್ನು ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದ "ಸಂಗಮನಾಥ" ಎಂದು ಭಾವಿಸಿಕೊಂಡು ಧಾರವಾಡದ ಸಮಾಜ ಪುಸ್ತಕಾಲಯದ ಮುಖ್ಯಸ್ಥರಿಗೆ "ಕನ್ನಡ ಸಾಹಿತ್ಯ ಚರಿತ್ರೆ" ಪುಸ್ತಕವನ್ನು ವಿ.ಪಿ.ಪಿ. ಮೂಲಕ ಕಳುಹಿಸಿಕೊಡುವಂತೆ ಕೋರಿ ಪತ್ರ ಬರೆಯಿರಿ. **(1 × 5 = 5)**



downloaded from: www.kpscvaani.com

Scanned by CamScanner